**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ,</u>**
**<u>ಕಡೂರು.</u>**

**<u>ಸಿ.ಸಿ.1031/2022</u>**

**<u>ಫಿರ್ಯಾದುದಾರರು</u>** ಃ ಸರ್ಕಾರದ ಪರವಾಗಿ ಕಡೂರು ಪೊಲೀಸರಿಂದ

**-ವಿರುದ್ದ-**

**<u>ಆರೋಪಿತರು</u>** ಃ ಮಹಾಂತೇಶ ಯಾನೆ ಮಹಾಂತಪ್ಪ ಮಲಕಾಜಪ್ಪ ತೋಟಗೇರ ಬಿನ್ ಮಲಕಾಜಪ್ಪ, 47 ವರ್ಷ, ಕೆ.ಎಸ್.ಆರ್.ಟಿ.ಸಿ. ಚಾಲಕ, ಬ್ಯಾಡ್ಜ್ ನಂ.2968, ಹೊಸಪೇಟೆ ಡಿಪೋ, ಸ್ವಂತ ಊರು ವಾಸ ಃ ಇದ್ದಲಗಿ ಗ್ರಾಮ ಮತ್ತು ಅಂಚೆ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

**<u>-ಃಆಪಾದನೆಃ-</u>**

ದಿನಾಂಕ 20.09.2021 ರಂದು ಮಧ್ಯಾಹ್ನ 1-00 ರ ಸಮಯದಲ್ಲಿ ಕಡೂರು ಪೊಲೀಸ್ ಠಾಣಾ ವ್ಯಾಪ್ತಿಯ ಎನ್.ಹೆಚ್.206 ರಸ್ತೆ ಹರುವನಹಳ್ಳಿ ಕ್ರಾಸ್ ಬಳಿ ಚಾಸಾ-1 ಮಾಲತೇಶ ರವರ ದೊಡ್ಡಪ್ಪ ರೇವಣ್ಣರವರು ಚಾಸಾ-1 ರವರ ಬಾಬ್ತು ಟಿ.ವಿ.ಎಸ್.ಎಕ್ಸೆಲ್ ನಂ.ಕೆ.ಎ.66 ಹೆಚ್ 8311 ರಲ್ಲಿ ಕಡೂರು ಕಡೆಯಿಂದ ತಂಗಲಿ ಗ್ರಾಮದ ಕಡೆಗೆ ಹೋಗುತ್ತಿರುವಾಗ, ಆರೋಪಿಯಾದ ನೀವು ಕೆ.ಎಸ್.ಆರ್.ಟಿ.ಸಿ. ಬಸ್ ಸಂಖ್ಯೆಃ ಕೆ.ಎ. 35 ಎಫ್ 416 ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು, ಹಿಂಬದಿಯಿಂದ ರೇವಣ್ಣ ರವರು ಚಾಲನೆ ಮಾಡುತ್ತಿದ್ದ ವಾಹನಕ್ಕೆ ಡಿಕ್ಕಿಪಡಿಸಿ ಭಾರತೀಯ ದಂಡ ಸಂಹಿತೆಯ ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ .

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಮೇಲೆ ಹೇಳಿದ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಚಾಸಾ-1 ರವರ ದೊಡ್ಡಪ್ಪ ರೇವಣ್ಣರವರು ಚಾಲನೆ ಮಾಡುತ್ತಿದ್ದ ವಾಹನಕ್ಕೆ ಡಿಕ್ಕಿಪಡಿಸಿದ ಪರಿಣಾಮ, ರೇವಣ್ಣನವರು ಟಿ.ವಿ.ಎಸ್. ಸಮೇತ ಕೆಳಗೆ ಬಿದ್ದು ಅವರ ತಲೆಗೆ, ಮುಖಕ್ಕೆ, ಕೈಕಾಲುಗಳಿಗೆ ತೀವ್ರ ಸ್ವರೂಪದ ಗಾಯವುಂಟಾಗಿ, ಕಡೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗಕ್ಕೆ ಕರೆದುಕೊಂಡು ಹೋಗುತ್ತಿರುವಾಗ, ಮಾರ್ಗ ಮಧ್ಯೆ ಸಂಜೆ ಸುಮಾರು 4.00 ಗಂಟೆಗೆ ಮೃತ ಪಡಲು ಕಾರಣರಾಗಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 304 (ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಉಃ ತಿಳಿಯಿತು

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉಃನಾವು ಯಾವುದೇ ತಪ್ಪು ಮಾಡಿರುವುದಿಲ್ಲ. ವಿಚಾರಣೆಯಾಗಬೇಕು.

ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕಃ 13 ನೇ ಅಕ್ಟೋಬರ್ 2023.

ಸಹಿ-

(ಎಂ.ಎನ್.ರಾಮ್ ಪ್ರಶಾಂತ್)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಡೂರು.